ಕಂಡು ನಾನು 'ಹೇ..... ಹೋ....' ಎಂದು ಕೂಗಿ ಒಂದೆರಡು ಕಲ್ಲು ಎಸೆದು ಓಡಿಸಿದೆ. ಅವು ಎಷ್ಟೇ ಕಿರುಚಿದರೂ ಕಲ್ಲು ಹೊಡೆದರೂ ಹಾರಿ ಮತ್ತೊಂದು ಕಡೆ ಕೂತು ತಿನ್ನುತ್ತಿದ್ದವು. ಆದರೆ ಒಂದು ಕಡೆ ಮಾತ್ರ ಯಾವ ಹಕ್ಕಿಯೂ ಹೋಗದೆ ತೆನೆಗಳು ಕಾಳುಗಳಿಂದ ತುಂಬಿ ಭಾರವಾಗಿ ನೆಲ ನೋಡುತಿದ್ದವು. ಅವನ್ನು ನೋಡಿದ ಹೆಂಡತಿ 'ಇಲ್ಯಾಕೆ ಎಲ್ಲಾ ತೆನೆಗಳೂ ಚೆನ್ನಾಗಿಯೇ ಇವೆ? ಹಕ್ಕಿ ಕುಕ್ಕಿರುವ ಕುರುಹು ಎಲ್ಲೂ ಕಾಣಿಸುತ್ತಿಲ್ಲವಲ್ಲಾ?' ಎಂದು ಆಶ್ಚರ್ಯದಿಂದ ಕೇಳಿದಳು. ನನಗೂ ಅದು ಅಚ್ಚರಿಯಾಗೇ ಕಂಡಿತು. ಏಕಿರಬಹುದು ಎಂದು ಗಮನಿಸಿದೆ. ಅಲ್ಲಿ ನನ್ನ ಅಪ್ಪ ಒಂದು ಉದ್ದನೆಯ ಕೋಲನ್ನು ನೆಟ್ಟು ಅದರ ತುದಿಗೆ ಅಮ್ಮನ ಹಳೆಯ ಸೀರೆಯ ಬಟ್ಟೆಯೊಂದನ್ನು ಕಟ್ಟಿದ್ದು ಕಣ್ಣಿಗೆ ಬಿತ್ತು.

ನಾನು ಚಿಕ್ಕವನಿದ್ದಾಗ ಊರ ಹುಡುಗರ ಜೊತೆ ಬುಗುರಿ ಆಡಲು ಅಮ್ಮನ ಹಳೆಯ ಕಾಟನ್ ಸೀರೆಯಿಂದ ತಯಾರಿಸಿದ್ದ ಚಾಟಿಯನ್ನು ತೆಗೆದುಕೊಂಡು ಹೋದಾಗಿನಿಂದ ಹುಡುಗರೆಲ್ಲಾ ನನ್ನಿಂದ ದೂರ ಸರಿಯುತ್ತಿದ್ದರು. ಏಕೆಂದರೆ ಆ ಸೀರೆಯ ಬಟ್ಟೆಯಿಂದ ಹೆಣೆದ ಚಾಟಿಯಿಂದ ಬುಗುರಿ ಸುತ್ತಿ ಗುರಿ ಇಟ್ಟು ಹೊಡೆದರೆ ಹುಡುಗರ ಬುಗುರಿಗೆ ಗುನ್ನ ಬಿದ್ದು ತುಂಡಾಗಿ ಪೂರ್ವಕ್ಕೊಂದು ಪಶ್ಚಿಮಕ್ಕೊಂದು ಬೀಳುತ್ತಿದ್ದವು. ನನಗೆ ವಿಪರೀತ ನೆಗಡಿಯಾಗಿ, ಕರ್ಚೀಫ್ ತಂದು ಕೊಡುವವರೆಗೆ ಶಾಲೆಗೆ ಹೋಗುವುದಿಲ್ಲ ಎಂದು ಹಠ ಮಾಡಿದಾಗ ಅಮ್ಮ ಇದನ್ನೇ ಕರ್ಚೀಫ್ ಥರ ಬಳಸು ಎಂದು ಮತ್ತದೇ ಹಳೆಯ ಸೀರೆಯನ್ನು ಹರಿದು ನನ್ನ ಚೆಡ್ಡಿ ಜೇಬಿಗೆ ತುರುಕಿದ್ದಳು. ಒಮ್ಮೆ ನನ್ನ ಸೊಂಟದಲ್ಲಿದ್ದ ಉಡ್ದಾರ ಕಾಣೆಯಾಗಿ ನನ್ನ ಚೆಡ್ಡಿ ಸೊಂಟದ ಮೇಲೆ ನಿಲ್ಲುತ್ತಿರಲಿಲ್ಲ. ಶಾಲೆಯ ಬೆಲ್ಲು ಕೂಡ ಹೊಡೆದು ಹತ್ತು ನಿಮಿಷವಾಗಿ ನಾನು ಒಂದು ಕೈಯಲ್ಲಿ ಚೆಡ್ಡಿ ಮತ್ತೊಂದು ಕೈಯಲ್ಲಿ ಸ್ಲೇಟನ್ನು ಹಿಡಿದುಕೊಂಡು ಅಳುತ್ತಾ ನಿಂತಿದ್ದಕ್ಕೆ ಅಮ್ಮ ಉಟ್ಟಿದ್ದ ಹರಕಲು ಸೀರೆಯ ಅಂಚನ್ನು ಹರಿದು, ಚೆಡ್ಡಿ ಕೆಳಗಿಳಿಯದಂತೆ ಗಟ್ಟಿಯಾಗಿ ಕಟ್ಟಿ ಶಾಲೆಗೆ ಓಡಿಸಿದ್ದಳು.

ಬೆಳೆಗಳ ನಡುವೆ ಬೆಳೆವ ಕಳೆಯನ್ನು ಎಡೆಕುಂಟೆಯಿಂದ ತೆಗೆಯುವಾಗ ಎತ್ತುಗಳು ಪೈರುಗಳನ್ನು ತಿನ್ನಬಾರದೆಂದು ಅವುಗಳ ಬಾಯಿಗೆ 'ಬಾಯಿ ಕುಕ್ಕೆ' ಯನ್ನು ಕಟ್ಟುತ್ತಿದ್ದೆವು. ಆದರೂ ಕೆಲವೊಮ್ಮೆ ಸಾಹಸ ಮಾಡಿ ಆ ಬಾಯಿ ಕುಕ್ಕೆಯ ಸಂದಿನಿಂದ ತಮ್ಮ ಉದ್ದನೆಯ ಮತ್ತು ಒರಟಾದ ನಾಲಗೆಯನ್ನು ತೆಗೆದು, ನಾವು 'ಏಯ್' ಎಂದು ಹಗ್ಗ ಹಿಂದಕ್ಕೆಳೆಯುವಷ್ಟರಲ್ಲಿ ಗಿಡವನ್ನು ಬುಡಸಮೇತ ಕಿತ್ತು ತಿನ್ನುತಿದ್ದವು. ಅಪ್ಪನ ಕಷ್ಟ ನೋಡಲಾಗದೆ ನಾನು ಈ ಬಾಯಿ ಕುಕ್ಕೆಗೆ ಏನಾದರೂ ಮಾಡಬೇಕಲ್ಲಾ ಎಂದು ಅದರ ಸಂದುಗಳನ್ನು ಅಮ್ಮನ ಹಳೆಯ ಸೀರೆಯಿಂದ ಹುರಿ ಮಾಡಿ ಹೆಣೆದೆ. ಅಂದಿನಿಂದ ಎತ್ತಿನ ಬಾಯಿಯಿಂದ ಬಾಯಿಕುಕ್ಕೆಯನ್ನು ಬಿಚ್ಚುವವರೆಗೂ ಪಾಪ ಒಂದು ಗರಿಕೆ ಹುಲ್ಲೂ ಕೂಡ ಅವುಗಳಿಗೆ ಸಿಗುತ್ತಿರಲಿಲ್ಲ. ಹೊಲದಲ್ಲಿ ಬೀಜ ಬಿತ್ತಲಿಕ್ಕಾಗಿ ಬೆರೆಸಿದ ಬೀಜ ಗೊಬ್ಬರವನ್ನು ಅಮ್ಮ ತನ್ನ ಹಳೆಯ ಸೀರೆಯಲ್ಲಿ ಹಾಕಿಕೊಂಡು ತನ್ನ ಸೊಂಟಕ್ಕೆ ಕಟ್ಟಿಕೊಂಡು ಬಿತ್ತುತ್ತಿದ್ದರು.

ಕೂರಿಗೆಯ 'ತಾಳ' ಮತ್ತು 'ಪೈಪು'ಗಳು ಬೀಳದಂತೆ ಅಮ್ಮನ ಸೀರೆಯಿಂದ ತಯಾರಿಸಿದ ಹುರಿಯಿಂದ ಕಟ್ಟುತ್ತಿದ್ದೆವು. ಪೈರು ಕಟಾವು ಮಾಡುವಾಗ ಆಕಸ್ಮಿಕವಾಗಿ ಕುಡುಗೋಲು ಕೈಮೇಲೆ ಬಂದು ಬೆರಳು ಕುಯ್ದುಕೊಂಡರೆ ತಕ್ಷಣ ಸ್ವಲ್ಪ ಮಣ್ಣನ್ನು ಹಾಕಿ ಅದೇ ಅಮ್ಮನ ಹಳೆಯ ಸೀರೆಯ ಬಟ್ಟೆಯಿಂದ ರಕ್ತ ಬರದಂತೆ ಕಟ್ಟುತ್ತಿದ್ದೆವು. ನಮ್ಮ ಮನೆಯ ಗೋಡೆ ಸಂದುಗಳಲ್ಲಿ ಇಲಿಗಳು ಬಿಲ ಮಾಡಿ ಹೆದ್ದಾರಿ ಮಾಡಿಕೊಂಡಾಗಲೂ ಅದನ್ನು ಬಂದ್ ಮಡಲು ಅಮ್ಮ ಅದೇ ಹಳೆಯ ಸೀರೆಯನ್ನು ಹರಿದು ಆ ಬಿಲಗಳಲ್ಲಿ ತುರುಕುತ್ತಿದ್ದರು. ಒಮ್ಮೆ ನಮ್ಮ ಹೊಲದಲ್ಲಿ ಒಂದು ಸಣ್ಣ ಬಿಲದೊಳಗೆ ಹಾವು ಕಂಡಿತು ಅದನ್ನ ಓಡಿಸಲು ಅಮ್ಮ ಹಳೆಯ ಸೀರೆಯ ತುಂಡೊಂದನ್ನು ಹರಿದು ಬೆಂಕಿ ಹಚ್ಚಿ ಬಿಲದ ಬಳಿ ಎಸೆದಳು. ಬಟ್ಟೆಯಿಂದ ಬಂದ ಹೊಗೆಯನ್ನು ಸಹಿಸಲಾಗದೆ ಹಾವು ಹಿಂದಿರುಗಿ ನೋಡದೇ ಸರಸರನೇ ಜಾಗ ಖಾಲಿ ಮಾಡಿತು. ಸೂರ್ಯಕಾಂತಿ ಮತ್ತು ಜೋಳದ ತೆನೆಗಳು ಕಾಳು ತುಂಬಿ ನೆಲದ ಮೇಲೆ ಬಿದ್ದಾಗ ಅವುಗಳನ್ನು ಮತ್ತೆ ಮೆಲಕ್ಕೆತ್ತಿ ಕಟ್ಟಲೂ ಅದೇ ಸೀರೆಯ ಸಹಾಯ ಪಡೆಯಬೇಕಿತ್ತು. ರಾಗಿಯ ಹುಲ್ಲಿನ ಬಣವೆಯನ್ನು ತಾತ್ಕಾಲಿಕವಾಗಿ ಹೊಲದಲ್ಲೇ ಕಟ್ಟಿರುತ್ತಿದ್ದೆವು. ಅವುಗಳನ್ನು ಕಣಕ್ಕೆ ಸಾಗಿಸಲೆಂದು ಬಣವೆಯನ್ನು ಬಿಡಿಸಿದಾಗ ಅದರ ತಳಭಾಗದಲ್ಲಿ ಇಲಿಗಳು ಕಟ್ಟಿಕೊಂಡ ಬೆಚ್ಚನೆಯ ಗೂಡಲ್ಲಿ ಅಮ್ಮನ ಸೀರೆಯ ಬಟ್ಟೆ ಕಾಣಿಸುತ್ತಿದ್ದವು. ನಮ್ಮ ಹೊಲದ ಸುತ್ತ ಮುತ್ತ ಕೆಲವು ಪಕ್ಷಿಗಳೂ ಕೂಡ ತಮ್ಮ ತಮ್ಮ ಗೂಡುಗಳನ್ನು ಕಟ್ಟಿಕೊಳ್ಳಲು ಕಸಕಡ್ಡಿಯ ಜೊತೆ ಅಮ್ಮನ ಸೀರೆಯ ತುಣುಕುಗಳನ್ನು ಸೇರಿಸಿರುತ್ತಿದ್ದವು. ಕಣದಲ್ಲಿ ಸುಗ್ಗಿಯ ಕೆಲಸ ಮಾಡಿ ಕಾಳುಗಳನ್ನು ಗೋಣಿಚೀಲದಲ್ಲಿ ತುಂಬಿಕೊಂಡು ಮನೆಗೆ ಹೊತ್ತೊಯ್ಯುವಾಗ ಚೀಲ ತೂತು ಬಿದ್ದು ಕಾಳು ಚೆಲ್ಲುತ್ತಿದ್ದರೆ ಆ ತೂತುಗಳನ್ನು ಮುಚ್ಚಲೂ ಮತ್ತು ಚೀಲದ ಬಾಯಿ ಹೊಲೆಯಲೂ ಸಹ ಅಮ್ಮನ ಹಳೆಯ ಸೀರೆಯ ಸಹಾಯ ಬೇಕಾಗುತ್ತಿತ್ತು. ಕಾಡಿನಿಂದ ತರುತ್ತಿದ್ದ ಸೌದೆಯ ಹೊರೆಯನ್ನು ಕಟ್ಟಲು ಮತ್ತು ಅದನ್ನು ತಲೆಯ ಮೇಲೆ ಹೊತ್ತುಕೊಳ್ಳಲಿಕ್ಕಾಗಿ ಸಿಂಬು ಮಾಡಿಕೊಳ್ಳಲು, ಅಜ್ಜಿಗೆ ತಲೆನೋವು ಬಂದಾಗ ಹುರಿ ಮಾಡಿ ತಲೆಗೆ ಕಟ್ಟಿಕೊಳ್ಳಲು ಮತ್ತು ಆಕೆಯ ಕನ್ನಡಕ ಬೀಳದಂತೆ ಬಿಗಿಯಾಗಿ ತಲೆಯ ಸುತ್ತ ಕಟ್ಟಿಕೊಳ್ಳಲು, ಸೀಮೆ ಎಣ್ಣೆ ದೀಪಕ್ಕೆ ಬತ್ತಿ ಮಾಡಲು, ಹಬ್ಬ ಹರಿದಿನಗಳಲ್ಲಿ ಗೋಡೆಗೆ ಸುಣ್ಣ ಬಣ್ಣ ಬಳಿಯಲು, ಬಾಗಿಲಿಗೆ ಮಾವಿನ ಎಲೆಯ ತೋರಣ ಕಟ್ಟಲು, ಹೊಸದಾಗಿ ಸಾಕಲು ತಂದಿದ್ದ ಕೋಳಿ ಮರಿಯ ಕಾಲು ಕಟ್ಟಲು, ನಾನು ಅಳುವಾಗ ಕಣ್ಣೀರು ಒರೆಸಲು, ಬಿಸಿಲಿನ ಬೇಗೆಯಿಂದ ತಪ್ಪಿಸಿಕೊಳ್ಳಲು, ಮಳೆಯಿಂದ ರಕ್ಷಿಸಿಕೊಳ್ಳಲು, ಸೋರುತ್ತಿದ್ದ ನಲ್ಲಿ ನೀರು ಬಂದ್ ಮಾಡಲು, ಊರ ದೇವತೆಯಾದ ಚೌಡಮ್ಮ ಮಂತ್ರಿಸಿಕೊಟ್ಟ ನಿಂಬೆ ಹಣ್ಣು ಮತ್ತು ತೆಂಗಿನ ಕಾಯಿಯನ್ನು ಮನೆಯ ಹೊಸ್ತಿಲಿಗೆ ಕಟ್ಟಲು, ಕಣ್ಣಿಗೆ ಕಟ್ಟಿಕೊಂಡು ಹುಡುಗರ ಜೊತೆ ಕಣ್ಣಾ ಮುಚ್ಚಾಲೆ ಆಟ ಆಡಲು, ನೆಲ ಒರೆಸಲು, ಗಣೇಶ ಹಬ್ಬದಂದು ಹುಡುಗರೆಲ್ಲಾ ಸೇರಿ ದೇವಸ್ಥಾನದ ಬಳಿ ಗಣೇಶ ಕೂರಿಸಿದಾಗ ಆ ಚಪ್ಪರವನ್ನು ಸಿಂಗರಿಸಲು, ನಮ್ಮೂರ ಕೆರೆಯಲ್ಲಿ ಮೀನು ಹಿಡಿಯಲು, ಹಿತ್ತಲ ತಟ್ಟಿ ಕಟ್ಟಲು, ಬಾವಿಯಿಂದ ನೀರು ಸೇದುವ ಹಗ್ಗಕ್ಕೆ ಕುಣಿಕೆ ಮಾಡಲು, ಮಜ್ಜಿಗೆ ಕಡೆಯಲು, ಕರುವನ್ನು ಕಟ್ಟಲು, ಬಿದ್ದು ಏಟು ಮಾಡಿಕೊಂಡ ಜಾಗಕ್ಕೆ ಬಿಸಿ ಉಪ್ಪಿನ ಕಾವು ಕೊಡಲು, ಕಣ್ಣಿಗೆ ಏಟಾದಾಗ ಬಾಯೊಳಗೆ ಬಟ್ಟೆ ತುರುಕಿ ಫೂ..... ಎಂದು ಊದಿ ಬಿಸಿ ಮಾಡಿ ಕಣ್ಣಿಗೆ ಒತ್ತಿಕೊಳ್ಳಲು, ವರುಷಕ್ಕೊಮ್ಮೆ ಬರುತ್ತಿದ್ದ ಅಲೆಮಾರಿ ಜನಾಂಗದ ಮಹಿಳೆಯರು ಉಟ್ಟ ಹರಕಲು ಸೀರೆಗೆ ಬದಲಾಗಿ ಅಮ್ಮನ ಸೀರೆ ಕೊಟ್ಟು ಮಾನ ಕಾಪಾಡಲು, ಸಡಿಲಾಗಿದ್ದ ಪೊರಕೆಯನ್ನು ಗಟ್ಟಿಯಾಗಿ ಕಟ್ಟಲು, ಅ. ಆ. ಇ. ಈ. ಬರೆದ ಸ್ಲೇಟನ್ನು ಒರೆಸಲು, ಒಲೆಯ ಮೇಲಿಂದ ಬಿಸಿ ಪಾತ್ರೆಯನ್ನು ಇಳಿಸಲು, ಕಿತ್ತು ಹೋದ ಹವಾಯಿ ಚಪ್ಪಲಿ ಕಟ್ಟಲು, ಅಪ್ಪನ ಆಸ್ತಿಯ ಕಡತಗಳನ್ನು ಮುಚ್ಚಿಡಲು, ಹೊಲಕ್ಕೆ ಬುತ್ತಿಯನ್ನು ಕಟ್ಟಿಕೊಂಡು ಹೋಗಲು, ನನ್ನ ಬಿಲ್ಲಿಗೆ ದಾರವಾಗಿ ಕಟ್ಟಲು, ನಾನು ಬೆಂಗಳೂರಿನಲ್ಲಿದ್ದಾಗ ಬಿಸಿ ಬಿಸಿ ರೊಟ್ಟಿ ಕಟ್ಟಿಕೊಡಲು, ಹೀಗೆ ಅಮ್ಮನ ಸೀರೆ ನನ್ನ ಉಡ್ದಾರದಿಂದ ಹಿಡಿದು ಎತ್ತಿನ ಮೂಗುದಾರದವರೆಗೆ ಬಳಕೆಯಾಗುತ್ತಿತ್ತು.

ನನ್ನ ಹೆಂಡತಿ ಮೊದಲ ಬಾಣಂತನ ತವರು ಮನೆಯಲ್ಲಿ ಮುಗಿಸಿ, ನಮ್ಮ ಮನೆಗೆ ಹಿಂತಿರುಗುವಾಗ ವಿಪರೀತ ಚಳಿ ಇತ್ತು. ನಾನು ಸಿಟಿಗೆ ಹೋಗಿ ಮಗಳ ಆರೈಕೆಗಾಗಿ ಏನೇನು ಬೇಕು ಅದನ್ನು ತರಲು ಹೊರಟಾಗ ಅಮ್ಮ ನನ್ನನ್ನು ತಡೆದು ನೀನೇನು ತರಲು ಹೊರಟಿದ್ದೀಯೋ ಅವನ್ನೆಲ್ಲಾ ನಾನು ಮನೆಯಲೇ ತಯಾರಿಸಿದ್ದೇನೆ ಎಂದು ಟೋಪಿ, ಕೌದಿ, ಮಗಳ ಮಲ ಮೂತ್ರ ಒರೆಸಲು ಕರ್ಚೀಫ್ ಗಾತ್ರದ ಬಟ್ಟೆ.. ಹೀಗೆ ಮೊಮ್ಮಗಳ ಆರೈಕೆಗಾಗಿ ಏನೇನು ಬೇಕೋ ಅವುಗಳನ್ನೆಲ್ಲಾ ಅವಳ ಹಳೆಯ ಕಾಟನ್ ಸೀರೆಯಲ್ಲೇ ತಯಾರಿಸಿದ್ದಳು. ಮಗಳನ್ನು ಮಲಗಿಸಲು ತೊಟ್ಟಿಲ ಬದಲಾಗಿ ಅಮ್ಮನ ಸೀರೆಯೇ ತೊಟ್ಟಿಲಾಗಿತ್ತು.

ಹೀಗೆ ಹೊಲದಲ್ಲಿ ನನ್ನ ತಂದೆ ಕೋಲು ನೆಟ್ಟು ಅದಕ್ಕೆ ಅಮ್ಮನ ಹಳೆಯ ಸೀರೆ ಕಟ್ಟಿದ್ದನ್ನು ನೋಡಿ ಇದೆಲ್ಲಾ ನೆನಪಾಯಿತು. ನನಗೆ ಅದು ನಮ್ಮ ರಾಷ್ಟ್ರ ಧ್ವಜದಂತೆ ಕಂಡಿತು. ನಮ್ಮ ರಾಷ್ಟ್ರ ಧ್ವಜ ಮೂರು ಬಣ್ಣಗಳೊಂದಿಗೆ ಜನರ ಭಾವನೆಗಳೊಳಗೆ ಬೆಸೆದುಕೊಂಡಿದ್ದರೆ, ನನ್ನ ಅಮ್ಮನ ಸೀರೆಯು ನನ್ನ ಭಾವನೆಗಳ ಜೊತೆಗೆ ಪಕ್ಷಿಗಳ ಮೇಲೆ ಪ್ರಾಯೋಗಿಕವಾಗಿಯೂ ಪರಿಣಾಮಕಾರಿಯಾಗಿಯೂ ಕೆಲಸ ಮಾಡುತ್ತಿತ್ತು. ನಾವು ರಾಷ್ಟ್ರ ಧ್ವಜಕ್ಕೆ ಹೇಗೆ ಸೆಲ್ಯೂಟ್ ಹೊಡೆಯುತ್ತೇವೆಯೋ ಅದೇ ರೀತಿ ನನಗರಿವಿಲ್ಲದೆಯೇ ಆ ಅಮ್ಮನ ಹರಕಲು ಸೀರೆಗೆ ಸೆಲ್ಯೂಟ್ ಹೊಡೆದಾಗ ನನ್ನನ್ನು ಕಂಡ ನನ್ನ ಮಗಳೂ ತನ್ನ ಬಲಗೈ ಮೇಲೆತ್ತಿದ್ದಳು. ■